# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ

## ಉತ್ತರ ಕನ್ನಡ : ಕಾರವಾರ

**ಎಸ್.ಸಿ. ನಂ. 36/2014**

**ದೋ.ಸಾ. : 47 ಪ್ರಾ.ಸಾ. : 24**

| | | |
|---|---|---|
| ಸಾಕ್ಷಿಯ ಹೆಸರು | : | ನೀಲಕಂಠ ರಾಮಚಂದ್ರ ನಾಯ್ಕ |
| ತಂದೆಯ ಹೆಸರು | : | ರಾಮಚಂದ್ರ ನಾಯ್ಕ |
| ವಯಸ್ಸು | : | 62 ವರ್ಷ |
| ಕೆಲಸ | : | ನಿವೃತ್ತ ಪೊಲೀಸ್ ಮುಖ್ಯ ಪೇದೆ |
| ವಾಸ | : | ಶಿರವಾಡ, ಕಾರವಾರ |

**ದಿನಾಂಕಃ 18-12-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

1. 2012 ರಿಂದ 2019 ರ ವರೆಗೆ ನಾನು ಕದ್ರಾ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಮುಖ್ಯ ಪೇದೆ ಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿಃ 14-02-2014 ರಂದು ರಾತ್ರಿ ಕದ್ರಾದ ರಾಜೀವ ನಗರದಲ್ಲಿ ವೇಲು ಹಾಗೂ ಆತನ ಮಕ್ಕಳ ಕೊಲೆಯಾದ ಸಂಬಂಧ ದಿಃ 15-02-2014 ರಂದು ಬೆಳಗಿನ ಜಾವ ತನಿಖಾಧಿಕಾರಿಯಾದ ಚಾಸಾ-57 ರವರು ನನಗೆ ಸತ್ಯ ನಾರಾಣಯ ಮೂರ್ತಿಯ ಶವವನ್ನು ಕಾಯಲು, ಚಾಸಾ-48 ರವರನ್ನು ವೇಲು ರವರ ಶವವನ್ನು ಕಾಯಲು ಮತ್ತು ಚಾಸಾ-49 ರವರನ್ನು ಅಶ್ವಿನಿಯ ಶವವನ್ನು ಕಾಯಲು ನಿಯೋಜಿಸಿರುತ್ತಾರೆ. ಅದರಂತೆ ನಾವು ಮೂರೂ ಜನ ಸ್ಥಳಕ್ಕೆ ತೆರಳಿ, ಶವಗಳ ಬೆಂಗಾವಲಿಗೆ ಇರುತ್ತೇವೆ. ನಾವುಗಳು ಶವಗಳ ಬೆಂಗಾವಲಿಗೆ ಇದ್ದಾಗ, ಚಾಸಾ-57 ರವರು ಸ್ಥಳಕ್ಕೆ ಬಂದು, ಸುಮಾರು 10-00 ಗಂಟೆಗೆ ಘಟನಾ ಸ್ಥಳಗಳ ಪಂಚನಾಮೆಯನ್ನು ಮಾಡಿ, ನಂತರ ಶವವಗಳನ್ನು ಕಾರವಾರದ ಜಿಲ್ಲಾ ಆಸ್ಪತ್ರೆಗೆ ತೆಗೆದುಕೊಂಡು ಬರುವಂತೆ ಸೂಚಿಸಿದ ಮೇರೆಗೆ, ನಾವು ಮೂರೂ ಜನರು ಸದರಿ ಮೂರೂ ಶವಗಳನ್ನು ಟಾಟಾ ಏಸ್ ವಾಹನದಲ್ಲಿ ಕಾರವಾರದ ಜಿಲ್ಲಾಸ್ಪತ್ರೆಗೆ ತಂದಿರುತ್ತೇವೆ.

2. ಶವಗಳನ್ನು ಆಸ್ಪತ್ರೆಗೆ ತಂದ ನಂತರ ಅಲ್ಲಿ ತನಿಖಾಧಿಕಾರಿಯಾದ ಚಾಸಾ-57 ರವರು ಸತ್ಯ ನಾರಾಯಣ ಮೂರ್ತಿಯ ಮೃತ ದೇಹದ ಶವ ಪಂಚನಾಮೆಯನ್ನು ನಡೆಸಿರುತ್ತಾರೆ ಹಾಗೂ

ಸತ್ಯ ನಾರಾಯಣ ಮೂರ್ತಿಯ ಶವ ಪರೀಕ್ಷೆ ಮಾಡಲು ವೈದ್ಯಾಧಿಕಾರಿಗಳಿಗೆ ನಮೂನೆ ನಂಃ 146(I) ಮತ್ತು 146(II) ಗಳನ್ನು ನೀಡಿರುತ್ತಾರೆ. ಆ ನಂತರ ಆಸ್ಪತ್ರೆಯ ವೈದ್ಯರು ಶವ ಪರೀಕ್ಷೆಯನ್ನು ನಡೆಸಿ, ಸತ್ಯ ನಾರಾಯಣ ಮೂರ್ತಿ ಶವ ಹಾಗೂ ಆತನ ಮೈ ಮೇಲೆ ಇದ್ದ ಬಟ್ಟೆಗಳನ್ನು ನನ್ನ ವಶಕ್ಕೆ ನೀಡಿರುತ್ತಾರೆ. ತದನಂತರ ನಾನು ಸತ್ಯ ನಾರಾಯಣಮೂರ್ತಿ ಶವವನ್ನು ಆತನ ಚಿಕ್ಕಪ್ಪನಾದ ಚಾಸಾ-30 ಹಾಗೂ ಚಾಸಾ-8 ರವರಿಗೆ ಬಿಟ್ಟುಕೊಟ್ಟಿರುತ್ತೇವೆ ಮತ್ತು ಸತ್ಯ ನಾರಾಯಣ ಮೂರ್ತಿಯ ಮೈ ಮೇಲೆ ಇದ್ದ ಬಟ್ಟೆಗಳನ್ನು ತನಿಖಾಧಿಕಾರಿಯಾದ ಚಾಸಾ-57 ರವರ ಮುಂದೆ ಹಾಜರುಪಡಿಸಿದ್ದು, ಅವರು ಸದರಿ ಬಟ್ಟೆಗಳ ಬಗ್ಗೆ ಬರವಣಿಗೆ ಮಾಡಿಕೊಂಡರು. ಈ ಪ್ರಕರಣದಲ್ಲಿ ನಾನು ತನಿಖಾ ಸಹಾಯಕನಾಗಿ ಕೆಲಸ ಮಾಡಿದ ಬಗ್ಗೆ ತನಿಖಾಧಿಕಾರಿಗಳ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ.

4. ಸಾಕ್ಷಿಯು ತಾನು ವೈದ್ಯಾಧಿಕಾರಿಗಳಿಗೆ ನೀಡಿದ ನಮೂನೆ ನಂಃ 146(I) ಮತ್ತು 146(II) ಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅವುಗಳನ್ನು ಒಟ್ಟಾರೆಯಾಗಿ ನಿಪಿ-65 ಎಂದು ಗುರುತಿಸಲಾಯಿತು. ಸಾಕ್ಷಿಯು ಸತ್ಯ ನಾರಾಯಣ ಮೂರ್ತಿಯ ರವರ ಶವವನ್ನು ಚಾಸಾ-8 ಮತ್ತು 30 ರವರಿಗೆ ಬಿಟ್ಟುಕೊಟ್ಟ ಬಗ್ಗೆ ಸ್ವೀಕೃತಿಗಳನ್ನು (ಪಾವತಿಗಳು) ನೋಡಿ ಗುರುತಿಸಿದ್ದು, ಚಾಸಾ-8 ರವರ ಸ್ವೀಕೃತಿಯನ್ನು ಈಗಾಗಲೇ ನಿಪಿ-44 ಎಂದು ಗುರುತಿಸಲಾಗಿರುತ್ತದೆ. ಚಾಸಾ-30 ರವರ ಸ್ವೀಕೃತಿಯನ್ನು ನಿಪಿ-66 ಎಂದು ಗುರುತಿಸಲಾಯಿತು. ಮೃತ ಸತ್ಯ ನಾರಾಯಣ ಮೂರ್ತಿ ರವರ ಬಟ್ಟೆ ಜಪ್ತು ಪಂಚನಾಮೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ-23 ಎಂದು ಗುರುತಿಸಲಾಗಿರುತ್ತದೆ. ಈಗ ನ್ಯಾಯಾಲಯದ ಮುಂದೆ ಇರುವ ಮೃತ ಸತ್ಯ ನಾರಾಯಣ ಮೂರ್ತಿಯ ರವರ ಬಟ್ಟೆಗಳಾದ ಮುದ್ದೆ ಮಾಲು-17 ಚಡ್ಡಿ , ಮುದ್ದೆ ಮಾಲು-18 ಅಂಗಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ನಿಪಿ-5 ಮತ್ತು 15 ಫೋಟೋಗಳಲ್ಲಿ ಮೃತ ಸತ್ಯ ನಾರಾಯಣ ಮೂರ್ತಿಯ ಶವವನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎ.ಎ.ಎ ವಕೀಲರಿಂದ**

5. ದಿಃ 15-02-2014 ರಂದು ನಾನು ಮೃತ ಸತ್ಯ ನಾರಾಯಣ ಮೂರ್ತಿಯ ಶವದ ಬೆಂಗಾವಲಿಗೆ ಹೋದ ಬಗ್ಗೆ ಠಾಣಾ ಡೈರಿಯಲ್ಲಿ ನಮೂದಿಸಿರುತ್ತೇನೆ. ನಾವು ಆ ದಿನ ಬೆಳಿಗ್ಗೆ 07-00 ಗಂಟೆಗೆ ಶವ ಬಿದ್ದ ಸ್ಥಳಕ್ಕೆ ಹೋಗಿರುತ್ತೇವೆ. ಶವ ಬಿದ್ದ ಅಕ್ಕ-ಪಕ್ಕದಲ್ಲಿ ಸುಮಾರು 50

ಮಂದಿ ಜನರು ಹಾಜರಿದ್ದರು. ಶವ ಬಿದ್ದ ಸ್ಥಳಕ್ಕೆ ನೀವು ಹೋಗುವ ಮುನ್ನ ಈಗಾಗಲೇ ಅಲ್ಲಿ ಎಷ್ಟು ಜನ ಪೊಲೀಸರು ಇದ್ದರು ?ಎಂದರೆ ಸಾಕ್ಷಿಯು ಮೊದಲಿಗೆ ಯಾರು ಇರಲಿಲ್ಲ ಎಂದು ನುಡಿದು ನಂತರ 3 ಜನ ಪೊಲೀಸರು ಇದ್ದರು ಎಂದು ನುಡಿಯುತ್ತಾರೆ. ನಾವು ಹೋಗುವ ಮೊದಲೇ ಶರತ್ ನಾಯ್ಕ, ಕೃಷ್ಣಾ ನಾಯ್ಕ ಮತ್ತು ಚರಣ್ ನಾಯ್ಕ ಎನ್ನುವ ಸಿಬ್ಬಂದಿಗಳು ಶವಗಳನ್ನು ಕಾಯುತ್ತಿದ್ದರು. ಆದರೆ ಯಾರು-ಯಾರು, ಯಾವ-ಯಾವ ಶವಗಳನ್ನು ಕಾಯುತ್ತಿದ್ದರು ಎಂದು ನನಗೆ ಈಗ ಹೇಳಲು ಬರುವುದಿಲ್ಲ. ನಾನು ಹಾಗೂ ನಮ್ಮ ಇತರೇ ಸಿಬ್ಬಂಗಳು ಸ್ಥಳಕ್ಕೆ ಹೋಗಿ, ಶವದ ಬೆಂಗಾವಲಿಗೆ ಇರುವುದಿಲ್ಲ ಎಂದರೆ ಸರಿಯಲ್ಲ. ಸ್ಥಳದಲ್ಲಿ ತನಿಖಾಧಿಕಾರಿಗಳು ಯಾವುದೇ ಪಂಚನಾಮೆಯನ್ನು ಮಾಡಿಲ್ಲ ಎಂದರೆ ಸರಿಯಲ್ಲ. ನಾವುಗಳು ಮೃತ ದೇಹಗಳನ್ನು ಟಾಟಾ ಏಸ್ ವಾಹನದಲ್ಲಿ ತೆಗೆದುಕೊಂಡು ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ಮೃತ ಸತ್ಯ ನಾರಾಯಣ ಮೂರ್ತಿಯ ಮೃತ ದೇಹದ ಮೇಲೆ ಇದ್ದ ಬಟ್ಟೆಗಳನ್ನು ವೈದ್ಯರು ನನಗೆ ನೀಡಿರುವುದಿಲ್ಲ ಹಾಗೂ ಅವುಗಳನ್ನು ನಾನು ತನಿಖಾಧಿಕಾರಿಗಳ ಮುಂದೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ತನಿಖಾಧಿಕಾರಿಗಳು ಸದರಿ ಬಟ್ಟೆಗಳನ್ನು ಜಪ್ತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ನಿಪಿ-23 ಪಂಚನಾಮೆಯನ್ನು ಹಾಗೂ ನಿಪಿ-5 ಮತ್ತು 15 ಪೋಟೋಗಳನ್ನು ಈ ಪ್ರಕರಣಕ್ಕಾಗಿ ತನಿಖಾಧಿಕಾರಿಗಳು ಸೃಷ್ಟಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ತನಿಖಾಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.
ಸಹಿ ಇದೆ/-

(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ